ಹೇಳಿದ್ದಾರೆ. ಆದರೆ ಈ ೫೦ ರೂಪಾಯಿ ಕೊಡುವುದರಿಂದ ಅವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅದನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳುತ್ತಿದ್ದೇನೆ. ಇನ್ನು ವಾರ್ಷಿಕ ವರಮಾನ ೬ ಸಾವಿರ ಮಿತಿ ಇದ್ದರೆ ಮಾತ್ರ ಇದಕ್ಕೆ ಅರ್ಜಿ ಹಾಕಬಹುದು ಎಂದು ಇದೆ. ಈ ಕಾಲದಲ್ಲಿ ಸಣ್ಣ ಪುಟ್ಟ ಆದಾಯವಿದ್ದರೂ ಕೂಡ ೬ ಸಾವಿರ ರೂಪಾಯಿ ವರಮಾನ ಬರುತ್ತದೆ. ಆದ್ದರಿಂದ ಈ ಆರು ಸಾವಿರ ರೂಪಾಯಿ ಮಿತಿಯನ್ನು ೧೨ ಸಾವಿರಕ್ಕೆ ಏರಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ನಿರ್ವಹಣಾ ಭತ್ಯೆಯನ್ನು ೫೦ ರೂಪಾಯಿಯಿಂದ ೧೦೦ ರೂಪಾಯಿಗೆ ವಿಸ್ತರಣೆ ಮಾಡತಕ್ಕಂತಹ ಪ್ರಸ್ತಾವನೆ ಸರಕಾರದಲ್ಲಿ ಇಲ್ಲ. ಮತ್ತೆ ವಾರ್ಷಿಕ ವರಮಾನವನ್ನು ೬ ಸಾವಿರದಿಂದ ೧೨ ಸಾವಿರಕ್ಕೆ ಏರಿಸತಕ್ಕಂತಹ ಪ್ರಸ್ತಾವನೆ ಕೂಡ ಸಧ್ಯಕ್ಕೆ ಸರಕಾರದಲ್ಲಿ ಇಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ನೀವು ೫೦ ರೂಪಾಯಿಗಳನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಈ ೫೦ ರೂಪಾಯಿಗಳನ್ನು ಕೊಡುವುದರಿಂದ ಅವರಿಗೆ ಪ್ರಯೋಜನವಾಗದೇ ಇರುವುದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ಇದನ್ನು ಜಾಸ್ತಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ೫೦ ರೂಪಾಯಿಗಳನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬ ಮಾನ್ಯ ಸದಸ್ಯರ ವಾದವನ್ನು ಸರ್ಕಾರ ಒಪ್ಪುವುದಕ್ಕೆ ಆಗುವುದಿಲ್ಲ. ಇದರಿಂದ ಬಹಳ ಜನರಿಗೆ ಪ್ರಯೋಜನವಾಗಿದೆ. ಏಕೆಂದರೆ ಈ ವರ್ಗದ ಜನರು ಚಾತಕ ಪಕ್ಷಿಯಂತೆ ಕಾದು ಈ ಹಣದಿಂದ ತಮ್ಮ ಜೀವನದಲ್ಲಿ ನೆಮ್ಮದಿಯ ಉಸಿರನ್ನು ಬಿಡುತ್ತಿದ್ದಾರೆ. ಮಾನ್ಯ ಸದಸ್ಯರು ೫೦ ರೂಪಾಯಿಗಳಿಂದ ೧೦೦ ರೂಪಾಯಿಗೆ ಹೆಚ್ಚಿಸಬೇಕೆಂದು ಏನು ಹೇಳಿದ್ದಾರೆ ಆ ರೀತಿ ಮಾಡಿದರೆ ನಮ್ಮ ಖಜಾನೆಯ ಮೇಲೆ ಬೀಳತಕ್ಕಂಥ ಹೊರೆಯ ಗಾತ್ರವನ್ನೂ ಕೂಡ ನಾವು ಆಲೋಚನೆ ಮಾಡಬೇಕಾಗುತ್ತದೆ. ಈ ಕಾರಣದಿಂದ ಈ ಪ್ರಸ್ತಾವನೆ ಸದ್ಯದಲ್ಲಿ ಸರ್ಕಾರದಲ್ಲಿಲ್ಲ ಈಗ ಮಾನ್ಯ ಸದಸ್ಯರು ಏನಂ ವಿಚಾರ ಹೇಳಿದ್ದಾರೆ ಇದರ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆ ಮಾತ್ನಾಡಿಯೂ ಕೂಡ ನಾನು ಪ್ರಸ್ತಾಪ ಮಾಡುತ್ತೇನೆ. ಆದರೆ ಸದ್ಯದ ಮಟ್ಟಿಗೆ ಮಾತ್ರ ಈ ಪ್ರಸ್ತಾವನೆ ಸರ್ಕಾರದಲ್ಲಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ.—ಮಾನ್ಯ ಅಧ್ಯಕ್ಷರೆ, ಅಂಗವಿಕಲರ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಒಂದು ಸಂಸ್ಥೆ ಇದೆ. ಈ ಸಂಸ್ಥೆಯು ಪ್ರತಿವರ್ಷವೂ ಅಂಗವಿಕಲರಿಗೆ ತ್ರಿಚಕ್ರ ವಾಹನಗಳನ್ನು ಕೊಡುತ್ತಿತ್ತು. ಆದರೆ ಕಳೆದ ೩-೪ ವರ್ಷಗಳಿಂದ ಯಾರಿಗೂ ತ್ರಿಚಕ್ರ ವಾಹನಗಳನ್ನು ಕೊಡುತ್ತಿಲ್ಲ. ಆದ್ದರಿಂದ, ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಈ ತ್ರಿಚಕ್ರ ವಾಹನಗಳನ್ನು ಅಂಗವಿಕಲರಿಗೆ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲನೆ ಮಾಡಲಾಗುವುದು.

ರಾಜಾಜಿನಗರ ಕ್ಷೇತ್ರದ ಜನರಿಗೆ ಮನೆಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೩೫. ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ).—ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜಾಜಿ ನಗರ ಕ್ಷೇತ್ರಕ್ಕೆ ಸೇರಿದ ನಾಗರೀಕರು ಮನೆ ಬಳಕೆ ವಿದ್ಯುತ್‌ಗೆ ೧೯೮೯ನೇ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಆ ಪೈಕಿ ಎಷ್ಟು ಮನೆಗಳಿಗೆ ವಿದ್ಯುತ್ ಒದಗಿಸಲಾಗಿದೆ ?

ಆ) ಇನ್ನು ಎಷ್ಟು ಮನೆಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ, ಇದಕ್ಕೆ ವಿಳಂಬವಾಗಲು ಕಾರಣವೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ರಾಜಾಜಿನಗರದ ಕ್ಷೇತ್ರಕ್ಕೆ ಸೇರಿದ ನಾಗರೀಕರಿಂದ ಮನೆ ಬಳಕೆಗೆ ವಿದ್ಯುತ್‌ಗೆ ೧೯೮೯ನೇ ಜನವರಿಯಿಂದ ಇಲ್ಲಿಯವರೆಗೆ ಒಟ್ಟು ೬,೦೫೯ ಅರ್ಜಿಗಳನ್ನು ಸಲ್ಲಿಸಿದ್ದಾರೆ. (ಇದರಲ್ಲಿ ಮನೆ ದೀಪಗಳಿಗೆ

೩,೨೭೭ ಮತ್ತು ಸರ್ವ ವಿದ್ಯುತ್ ಗೃಹಗಳಿಗೆ ೨,೭೮೨ ಅರ್ಜಿಗಳು ಸೇರಿವೆ). ಈ ಪೈಕಿ ೫,೧೭೮ ಮನೆಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಆ) ೮೮೧ ಮನೆಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ. (೧೭೨ ಮನೆ ದೀಪಗಳಿಗೆ ಮತ್ತು ೭೦೯ ಸರ್ವ ವಿದ್ಯುತ್ ಗೃಹ ವಿದ್ಯುತ್ ಸಂಪರ್ಕಕ್ಕೆ) ಮನೆ ದೀಪಗಳ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವವರು, ಮಂಡಲಿಯ ನಿಯಮಗಳನ್ನು ಪಾಲಿಸುವೇ ಇರುವ ಕಾರಣಕ್ಕಾಗಿ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲ. ಈ ಪ್ರದೇಶಗಳಲ್ಲಿನ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಓವರ್ ಲೋಡ್ ಆಗಿರುವುದರಿಂದ ಇದರ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮಕೈಗೊಂಡಿದ್ದು ಇದಾದ ನಂತರ ವಿದ್ಯುತ್ ಸಂಪರ್ಕ ನೀಡಲು ಉದ್ದೇಶಿಸಲಾಗಿದೆ.

ಶ್ರೀ ಕೆ. ಲಕ್ಷ್ಮಣ್ಣ.—ಮಾನ್ಯ ಅಧ್ಯಕ್ಷರೆ, ''ರಾಜಾಜಿನಗರ ಕ್ಷೇತ್ರಕ್ಕೆ ಸೇರಿದ ನಾಗರೀಕರು ಮನೆ ಬಳಕೆ ವಿದ್ಯುತ್‌ಗೆ ೧೯೯೯ರ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಅರ್ಜಿಗಳನ್ನು ಸಲ್ಲಿಸಿದ್ದಾರೆ ಎಂದು ನಾನು ಕೇಳಿರುವ ಪ್ರಶ್ನೆಗೆ ''೬೦೫೫ ಅರ್ಜಿಗಳನ್ನು ಸಲ್ಲಿಸಿರುತ್ತಾರೆ'' ಎಂದು ಉತ್ತರವನ್ನು ಮಾನ್ಯ ಮಂತ್ರಿಗಳು ನೀಡಿದ್ದಾರೆ. ಮತ್ತು ''ಇನ್ನು ಎಷ್ಟು ಮನೆಗಳಿಗೆ ವಿದ್ಯುತ್‌ನ್ನು ಒದಗಿಸಬೇಕಾಗಿದೆ'' ಎಂಬ ನನ್ನ ಇನ್ನೊಂದು ಪ್ರಶ್ನೆಗೆ ''೫,೧೭೮ ಮನೆಗಳಿಗೆ ವಿದ್ಯುತ್ ಒದಗಿಸಲಾಗಿದೆ. ಉಳಿದ ೮೮೧ ಮನೆಗಳಿಗೆ ವಿದ್ಯುತ್‌ನ್ನು ಒದಗಿಸಬೇಕಾಗಿದೆ'' ಎಂದು ತಿಳಿಸಿದ್ದಾರೆ. ಮತ್ತು ಮನೆ ದೀಪಗಳ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವವರು ಮಂಡಲಿಯ ನಿಯಮಗಳನ್ನು ಪಾಲಿಸುವೇ ಇರುವ ಕಾರಣಕ್ಕಾಗಿ ಅವರಿಗೆ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲ ಎಂದು ತಿಳಿಸಿದ್ದಾರೆ, ಇದು ಯಾವ ರೀತಿಯ ಸಮಂಜಸವೋ ಗೊತ್ತಾಗುವುದಿಲ್ಲ. ಏಕೆಂದರೆ, ರೆವಿನ್ಯೂ ಜಾಗದಲ್ಲಿ ಕಟ್ಟಿರತಕ್ಕ ಮನೆಗಳಿಗೆ ಯಾವ ನಿಯಮವಿಲ್ಲದೆ ವಿದ್ಯುತ್‌ನ್ನು ಕೊಡುತ್ತಾರೆ. ಆದರೆ ಬೆಂಗಳೂರು ನಗರದ ಮಧ್ಯಭಾಗದಲ್ಲಿರುವ ರಾಜಾಜಿನಗರದಲ್ಲಿರುವವರು ಮಂಡಲಿಯ ನಿಯಮವನ್ನು ಪಾಲಿಸಲಿಲ್ಲ ಎಂದು ವಿದ್ಯುತ್ ನಿಲ್ಲಿಸಿರುವುದು ಸರಿಯೆ ? ಅಲ್ಲದೆ ಕಳೆದ ೩ ವರ್ಷಗಳಿಂದಲೂ ಟ್ರಾನ್ಸ್‌ಫಾರ್ಮರ್ ಇಲ್ಲ ಎಂದು ಹೇಳಿದರೆ ಅಲ್ಲಿರತಕ್ಕ ಜನರು ಏನು ಮಾಡಬೇಕು ? ಇವತ್ತಿನ ದಿವಸ ನಾಗರೀಕರಿಗೆ ಗ್ಯಾಸ್ ಸಿಕ್ಕುವುದಿಲ್ಲ, ಸೀಮೆ ಎಣ್ಣೆ ದೊರೆಯುವುದಿಲ್ಲ, ವಿದ್ಯುತ್ ಇಲ್ಲ ಎಂದರೆ ಅವರು ಹೋಟೆಲ್‌ಗೆ ಹೋಗಿ ಊಟ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ಭಾಗದ ಜನರ ತೊಂದರೆಯನ್ನು ನಿವಾರಿಸಲು ಸರ್ಕಾರ ಕೂಡಲೆ ಕ್ರಮ ತೆಗೆದುಕೊಂಡು ಆದಷ್ಟು ಬೇಗ ವಿದ್ಯುತ್‌ನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಕರ್ನಾಟಕ ರಾಜ್ಯದಲ್ಲಿ ಎಲ್ಲೇ ಆಗಲಿ ಮನೆ ಬಳಕೆಗೆ ಬೇಕಾದ ವಿದ್ಯುತ್‌ನ್ನು ಒದಗಿಸಲು ಪ್ರಯಾರಿಟಿ ಬೇಸಿಸ್ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಈಗಾಗಲೇ ಆದೇಶವನ್ನು ಮಂಡಲಿಯವರಿಗೆ ಕೊಟ್ಟಿದ್ದೇವೆ. ಇದರ ಪ್ರಕಾರ ಅರ್ಜಿಗಳನ್ನು ಸಲ್ಲಿಸಿರುವವರೆಲ್ಲರಿಗೂ ವಿದ್ಯುತ್ ಸಿಕ್ಕುತ್ತದೆ. ಆದರೆ ಅವರು ಮಂಡಲಿಯ ನಿಯಮಗಳನ್ನು ಅನುಸರಿಸಬೇಕು. ೧೭೨ ಮನೆಗಳಿಗೆ ಮನೆಬಳಕೆ ವಿದ್ಯುತ್‌ನ್ನು ಏನು ನಿಲ್ಲಿಸಲಾಗಿದೆ ಅವರಿಗೆ ತಕ್ಷಣ ಕೊಡುವಂತೆ ಹೇಳುತ್ತೇವೆ. ಆದರೆ ಅವರು ಮಂಡಲಿಯ ನಿಯಮಗಳನ್ನು ಪಾಲಿಸುವಂತೆ ತಾವು ಹೇಳಬೇಕು. ಮನೆಬಳಕೆ ವಿದ್ಯುತ್‌ನ್ನು ತಕ್ಷಣ ಕೊಡುತ್ತೇವೆ. ಆದರೆ ಎ.ಇ.ಹೆಚ್. ಬೇಕೆಂದು ಯಾರು ಕೇಳಿದ್ದಾರೆ ಅವರಿಗೆ ಕೊಡಬೇಕಾದರೆ ಕೆಲವು ದಿವಸ ತಡವಾಗುತ್ತದೆ. ಏಕೆಂದರೆ ಎ.ಇ.ಹೆಚ್. ಕೊಡುವುದಕ್ಕೆ ಯೋಚಿತವಾಗಿ ನಾವು ಪ್ರಯುಖವಾಗಿ ಎರಡು ಕೆಲಸವನ್ನು ಮಾಡಬೇಕಾಗಿದೆ. ಅದರಲ್ಲಿ ಮೊದಲನೆಯದಾಗಿ ಈಗಿರತಕ್ಕ ಟ್ರಾನ್ಸ್‌ಫಾರ್ಮರ್ ಏನಿದೆ ಅದರ ಕೆಪ್ಯಾಸಿಟಿಯನ್ನು ಹೆಚ್ಚುಮಾಡಬೇಕಾಗಿದೆ. ಕೆಪಾಸಿಟಿಯನ್ನು ಹೆಚ್ಚುಮಾಡಬೇಕಾದರೆ ಇದಕ್ಕೆ ಸುಮಾರು ೧೭.೨೬ ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಇನ್ನೊಂದು ಹೊಸ ಟ್ರಾನ್ಸ್‌ಫಾರ್ಮರ್ ತರಬೇಕಾದರೆ ಸುಮಾರು ೫೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ, ಈ ಎರಡು ಕೆಲಸಗಳನ್ನು ನಾವು ರಾಜಾಜಿನಗರದಲ್ಲಿ ಮಾಡಿ ಅಲ್ಲಿನ ಎಲ್ಲ ಜನರಿಗೂ ವಿದ್ಯುತ್‌ನ ಅನುಕೂಲಗಳನ್ನು ಒದಗಿಸಿಕೊಡುವಂತೆ ಹೇಳಿದ್ದೇನೆ.

ಶ್ರೀ ಕೆ. ಲಕ್ಷ್ಮಣ್ಣ.—ಕಳೆದ ೩ ವರ್ಷಗಳಿಂದ ನಾಗರೀಕರು ಕೊಟ್ಟಿರತಕ್ಕ ಅರ್ಜಿಗಳು ಹಾಗೆಯೇ ಕೊಳೆಯುತ್ತಿವೆ. ಟ್ರಾನ್ಸ್‌ಫಾರ್ಮರ್ ಹಾಕುವುದಕ್ಕೆ ಸರ್ಕಾರಕ್ಕೆ ೩ ವರ್ಷಕಾಲ ಬೇಕೆ ?

ಶ್ರೀ ಎಸ್. ಎಂ. ಯಾಹ್ಯಾ.—ಒಂದೊಂದು ಟ್ರಾನ್ಸ್‌ಫಾರ್ಮರ್‌ಗೆ ಸುಮಾರು ೫೬ ರಿಂದ ೭೫ ಲಕ್ಷ ರೂಪಾಯಿಗಳವರೆಗೂ ಆಗುತ್ತದೆ. ನಾನು ಒಂದು ವಿಚಾರವನ್ನು ವಿಶೇಷವಾಗಿ ಏನು ಹೇಳಿದ್ದೇನೆ ಎಂದರೆ, ಈಗ ರಾಜಾಜಿನಗರದಲ್ಲಿರುವ ಟ್ರಾನ್ಸ್‌ಫಾರ್ಮರ್‌ನ ಕೆಪ್ಯಾಸಿಟಿಯನ್ನು ಹೆಚ್ಚು

ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೂಡಲೇ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಇದಕ್ಕೆ ೧೭ ಲಕ್ಷ ಚಿಲ್ಲರೆ ಹಣವನ್ನು ಕೊಡಬೇಕಾಗಿದೆ. ಇದೇನೂ ಚಿಕ್ಕ ಕೆಲಸವಲ್ಲ, ಇದು ದೊಡ್ಡ ಕೆಲಸ. ಮಾನ್ಯ ಸದಸ್ಯರು ಇದನ್ನು ಗಮನಿಸಬೇಕು.

ಶ್ರೀ ರಾಮಲಿಂಗ ರೆಡ್ಡಿ.—ಮಾನ್ಯ ಅಧ್ಯಕ್ಷರೇ, ಇದು ರಾಜಾಜಿನಗರದ ಒಂದೇ ಪ್ರಶ್ನೆಯಲ್ಲ. ಇಡೀ, ಬೆಂಗಳೂರು ನಗರದ ಪ್ರಾಬ್ಲಮ್ ಆಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು ೫–೬ ವರ್ಷಗಳಿಂದ ಎ.ಇ.ಎಚ್, ಕೊಡದೆ ಇರುವುದರಿಂದ ಜನರು ಬಹಳ ತೊಂದರೆಯನ್ನು ಪಡುತ್ತಿರುತ್ತಾರೆ. ಸೀಮೆ ಎಣ್ಣೆ ಪ್ರಾಬ್ಲಮ್‌ನ ಪ್ರಸ್ತುತ ಪರಿಸ್ಥಿತಿ ತಮಗೆ ತಿಳಿದಿರುತ್ತದೆ. ಆದ್ದರಿಂದ ಅದಷ್ಟು ಜಾಗ್ರತೆ ಬೆಂಗಳೂರು ನಗರದಲ್ಲಿ ಎ.ಇ.ಹೆಚ್.ಗೆ ಬರತಕ್ಕಂಥ ಬೇಡಿಕೆಯ ಬಗ್ಗೆ ಗಮನವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

(ಉತ್ತರ ಇಲ್ಲ)

ಚುಕ್ಕೆ ಪ್ರಶ್ನೆ ೪೭೦ (೧೪೩೪) ಶ್ರೀ ಎಂ. ನಾರಾಯಣಸ್ವಾಮಿ
ಚುಕ್ಕೆ ಪ್ರಶ್ನೆ ೪೭೧ (೨೨೨) ಶ್ರೀ ಎಂ. ಪಿ. ವೆಂಕಟೇಶ್
ಚುಕ್ಕೆ ಪ್ರಶ್ನೆ ೪೭೨ (೧೫೬೦) ಶ್ರೀ ಸಂಭಾಷ್‌ಜೋಶಿ

} ಮಾನ್ಯ ಸದಸ್ಯರುಗಳು ಗೈರು ಹಾಜರಾಗಿದ್ದಾರೆ

ಸೇಡಂ ತಾಲ್ಲೂಕು ಮಂಥೋಳ ಗ್ರಾಮದ ನೇಕಾರರಿಗೆ ಮಂಜೂರಾದ ಮನೆಗಳ ಬಗ್ಗೆ

೧೮೩೧. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಗುಲ್ಬರ್ಗ ಜಿಲ್ಲೆ ಸೇಡಂ ತಾಲ್ಲೂಕು ಮಂಥೋಳ ಗ್ರಾಮದ ಕೈಮಗ್ಗ ನೇಕಾರರಿಗೆ ಮಂಜೂರಾದ ಮನೆಗಳನ್ನು ಅಡಿಪಾಯದವರೆಗೆ ತೋಡಿದ್ದು ೭–೮ ವರ್ಷಗಳಿಂದ ಕೆಲಸ ಸ್ಥಗಿತ ಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಇದಕ್ಕಾಗಿ ಖರ್ಚಾದ ಹಣವೆಷ್ಟು ;

(ಇ) ಈ ಕೆಲಸ ಸ್ಥಗಿತಗೊಳ್ಳಲು ಕಾರಣಗಳೇನು ;

(ಈ) ಈ ಕೆಲಸವನ್ನು ಪೂರ್ಣಗೊಳಿಸಿ ಯಾವಾಗ ನೇಕಾರರಿಗೆ ಸೌಲಭ್ಯ ಒದಗಿಸಲಾಗುವುದು ?

ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು).—

(ಅ) ಹೌದು.

(ಆ) ಕೆಲಸ ಸ್ಥಗಿತಗೊಳ್ಳುವ ಮುನ್ನ ಯಾವುದೇ ವೆಚ್ಚವನ್ನು ಭರಿಸಿಲ್ಲ.

(ಇ) ನಿರ್ಮಾಣ ಕಾರ್ಯಕ್ಕಾಗಿ ಪಡೆದ ಭೂಮಿಯು ನಿರ್ಮಾಣಕ್ಕೆ ಸಮರ್ಪಕವಾಗಿರದಿದ್ದುದು, ನಿರ್ಮಾಣ ಕಾರ್ಯ ಮಾಡಬೇಕಾದಂತಹ ಸ್ಥಳದಲ್ಲಿ ಅಡಿಪಾಯವನ್ನು ಭದ್ರಪಡಿಸಲು ಭರಿಸಬೇಕಾದಂತ ಹೆಚ್ಚುವರಿ ವೆಚ್ಚ ಹಾಗೂ ಯಾವ ಸ್ಥಳಗಳಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಗಿರಲಿಲ್ಲವೋ ಪ್ರಗತಿ ಹೊಂದಿರಲಿಲ್ಲವೋ ಅಂತಹ ಸ್ಥಳಗಳನ್ನು ಕೈ ಬಿಡಲು ಅಕ್ಕೊಟ್ಟರ್ ಲಳರ ಆಪೆಕ್ಸ್ ಮಾನಿಟರಿಂಗ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ.

(ಈ) ಉದ್ಭವಿಸುವುದಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರನ್ನು ಕೇಳುತ್ತಿದ್ದೇನೆ. ಮಂಥೋಳ ಗ್ರಾಮದ ನೇಕಾರರ ಮನೆಗಳ ಕೆಲಸ ಸ್ಥಗಿತಗೊಳ್ಳುವ ಮುನ್ನ ಯಾವ ವೆಚ್ಚವನ್ನು ಭರಿಸಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಮನೆಗಳನ್ನು ಕಟ್ಟಲು ಭೂಮಿಯನ್ನು ಖರೀದಿಸಿದ್ದಕ್ಕಾಗಿ ವೆಚ್ಚ ಮಾಡಿರಬಹುದಲ್ಲವೇ ? ಅಲ್ಲದೆ ಆ ಭೂಮಿಯಲ್ಲಿ ಅಡಿಪಾಯ ಭದ್ರಪಡಿಸಲು ಹೆಚ್ಚುವರಿ ವೆಚ್ಚಕ್ಕಾಗಿ ಈ ಕೆಲಸವನ್ನು ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ. ಅಡಿಪಾಯಕ್ಕಾಗಿ ೪–೫ ಸುತ್ತು ಬಳಿಗೆ ತೋಡಿದರೆ ಅಡಿಪಾಯ ಭದ್ರವಾಗಿರುತ್ತದೆಂದು ನನ್ನ ಅಭಿಪ್ರಾಯ. ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ನನ್ನ ಅಭಿಪ್ರಾಯ ಇಲ್ಲದಿದ್ದರೆ ಬೇರೆ ಸ್ಥಳಾವಕಾಶ ಮಾಡುತ್ತೇವೆ. ಆದಕ್ಕಾಗಿ ಆ ಬಡನೇಕಾರರಿಗೆ ಮನೆಗಳನ್ನು ಕಟ್ಟಿಕೊಡುವ ಕೆಲಸವನ್ನು ಕೈಗೆ ಎತ್ತಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.